ದಿನಾಂಕಃ 20-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ- ಎದುರುದಾರ ನಂ.**5** ಪರ  ಪರ ಶ್ರೀ.  ಎನ್ ಬಿ ಯು  ವಕೀಲರಿಂದ.

ಆ ದಿವಸ ನಾನು 5 ನೇ ಎದುರುದಾರರ ಮಿನಿ ಬಸ್ ವಾಹನದಲ್ಲಿ ಹಿರೇಕೇರೂರನಿಂದ ಸವಣೂರು ಕಡೆಗೆ ಪ್ರಯಾಣಿಸುತ್ತಿದ್ದೆ ಎಂದರೆ ಸರಿ. ನನ್ನಂತೆ ಉಳಿದ ಪ್ರಯಾಣಿಕರು ಆಸನದ ಮೇಲೆ ಕುಳಿತು ಪ್ರಯಾಣಿಸುತ್ತಿದ್ದರು ಎಂದರೆ ಸರಿ. ಆ ವಾಹನದ ಸಂಖ್ಯೆ  ಕೆಎ-04/ಸಿ-6479 ಎಂದರೆ ಸರಿ. ಆ ದಿವಸ ಸದರಿ ವಾಹನದ ಚಾಲಕ ವಾಹನವನ್ನು  ನಿಧಾನವಾಗಿ ಸಂಚಾರಿ ನಿಯಮ ಪಾಲಿಸಿ ಚಲಾಯಿಸುತ್ತಿದ್ದರು ಎಂದರೆ ಸರಿ. ವಾಹನದ ಚಾಲಕನಿಗೆ  ಚಾಲನೆ ಪರವಾನಿಗೆ ಪತ್ರ,  ವಾಹನಕ್ಕೆ  ವಿಮೆ ಇತ್ತು ಎಂದರೆ ಸರಿ. ಅಪಘಾತವಾದಾಗ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಚಾಲ್ತಿಯಲ್ಲಿ ಇರಲಿಲ್ಲ. ಅಪಘಾತವು ಲಾರಿ ನಂ.ಕೆಎ-40/ಎ-0667 ಇದರ ಚಾಲಕನ ದುಡುಕುತನದ ವಾಹನ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿ. 5 ನೇ ಎದುರುದಾರರು ನಮಗೆ ಪರಿಹಾರ ನೀಡುವ ಯಾವುದೇ ಹೊಣೆಗಾರಿಕೆ ಹೊಂದಿಲ್ಲದಿದ್ದರೂ ಸಹ ಅವರನ್ನು ನಾವು ವಿನಾ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.  ನನಗೆ ತೀವ್ರ ಸ್ವರೂಪದ ಗಾಯ ಆಗದೇ ಇದ್ದರೂ ಸಹ 5 ನೇ ಎದುರುದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ವೆಚ್ಚ ಮಾಡಿಲ್ಲ ಎಂದರೆ ಸರಿಯಲ್ಲ.  ನಾನು  ಮೊದಲಿನಂತಲೇ ಈಗಲೂ ಸಹ  ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ- ಎದುರುದಾರ ನಂ.**6** ಪರ  ಪರ ಶ್ರೀ.   ಎ ಎಸ್ ಪಿ   ವಕೀಲರಿಂದ.

ಅಪಘಾತವಾದಾಗ ನನಗೆ 60 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನಾನು  ಆಗ ಯಾವುದೇ ಕೆಲಸ ಮಾಡುತ್ತಿರಲಿಲ್ಲ  ಎಂದರೆ ಸರಿಯಲ್ಲ.  ನಾನು ಪ್ರತಿ ತಿಂಗಳು ರೂ.25 ಸಾವಿರ ಆದಾಯ ಪಡೆಯುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ಬಗ್ಗೆ

ಎಮ್ ಎಲ್ ಸಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಯಾವುದೇ ಗಾಯ ನನಗೆ ಆಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವೈದ್ಯಕೀಯ ವೆಚ್ಚ ಮಾಡಿದ ಬಗ್ಗೆ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಮತ್ತು ನನಗೆ ಆದ ಗಾಯಗಳು ಒಂದಕ್ಕೊಂದು ಹೊಂದಾಣಿಕೆ ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಗಾಯದಿಂದ ಯಾವುದೇ ಅಂಗನೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದಲೇ ಆಗಿರುತ್ತದೆ ಎಂದು ಪೊಲೀಸರು ಆಪಾದಿಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತವು ಲಾರಿ ಸಂಖ್ಯೆಃ ಕೆಎ-40/ಸಿ-0667 ಚಾಲಕನ ತಪ್ಪಿನಿಂದ ಆಗಿರುವುದರಿಂದ 6 ನೇ ಎದುರುದಾರರು ನನಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿ. ನಾನು ಪ್ರಯಾಣಿಸುತ್ತಿದ್ದ ವಾಹನದ ಇತರ ಪ್ರಯಾಣಿಕರು ಪರಿಹಾರ ಬೇಡಿ ಅರ್ಜಿ ಸಲ್ಲಿಸಿದ್ದು, ಆ ಅರ್ಜಿಗಳಲ್ಲಿ ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಾಗಿ ನ್ಯಾಯಾಲಯ ಕಂಡುಕೊಂಡು ಪರಿಹಾರ ನೀಡಿರುತ್ತಾರೆ ಎಂದರೆ ಸರಿ. ಈ ಅರ್ಜಿಯಲ್ಲಿ ನಾವು ಅವಶ್ಯಕ ಪಕ್ಷಗಾರ ಅಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).